ಅಂತ ಯೋಚನೆ ಮಾಡಿದೆ. ಕಡಬ ಅಂತ, ಅಲ್ಲಿಗೆ ಹೋಗಿದ್ದೆ. ಅಲ್ಲಿ ನಮಗೆ ಆಪ್ತರಾದವರು ತುಳಸಮ್ಮ ಅಂತ, ಅವರು ವೈಶ್ಯರು. ಅವರ ಮನೆಗೆ ಹೋದೆ. 'ಏನು ಮಾಡ್ತೀಯಾ ಮುಂದೆ' ಅಂದ್ರು. 'ಇಲ್ಲ, ಸಾಧ್ಯವಿಲ್ಲ, ಹಣ ಹೊಂದಿಸೋಕೆ ಆಗಲಿಲ್ಲ. ಇನ್ನೇನಿದ್ರೂ ಊರಿಗೆ ವಾಪಸ್ ಹೋಗಿ ನೇಕಾರಿಕೆ, ಗೂಡಿನ ಕೆಲಸ ಮಾಡ್ತೀನಿ' ಅಂದೆ. ಅವರು 'ಇರು' ಅಂದೋರೆ ಹೊರಗೆ ಹೋಗಿ ಬಂದು ಹಣ ತಂದುಕೊಟ್ಟರು. ಏನಂತ ಕೇಳಿದ್ರೆ, ಅವರು ತಮ್ಮ ಒಡವೇನ ಅಡ ಇಟ್ಟು ನನಗೆ ಹಣ ತಂದು ಕೊಟ್ಟಿದ್ರು. ಆಮೇಲೆ ಮತ್ತೆ ಮೈಸೂರಿಗೆ ಹೋಗಿ ಓದು ಮುಂದುವರೆಸಿದೆ.

◆ ಇಲ್ಲಿ ನಾವು ಬಿಟ್ಟುಬಿಟ್ಟ ಇನ್ನೊಂದು ಅಧ್ಯಾಯ ಇದೆ. ರಾಮಕೃಷ್ಣಾಶ್ರಮದ್ದು...

ಹೌದು, ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ ಶಾಂಭವಾನಂದರು ಅಂತಿದ್ದರು. ಅದು ಯಾಕೋ ಅವರಿಗೆ ನನ್ನ ಮೇಲೆ ಅಪಾರ ಪ್ರೀತಿ. ನನ್ನ ಆಲೋಚನೆಗಳು, ನಡವಳಿಕೆ ಎಲ್ಲ ಅವರಿಗೆ ಇಷ್ಟ ಆಗಿತ್ತು. ನನ್ನನ್ನ ಕಲ್ಕತ್ತಾಕ್ಕೂ ಕಳಿಸಿದ್ರು. ನಿಧಾನವಾಗಿ ಅವರು ನನ್ನನ್ನ ಆಶ್ರಮದ ವ್ಯವಸ್ಥೆಯೊಳಗೆ ಕರೆದುಕೊಳ್ಳುವ ಆಲೋಚನೆ ಮಾಡಿದ್ರು. ಕೊನೆಗೆ ಒಂದ್ಸಲ ಅವರು ಕೇಳಿದ್ರು. 'ನಿನ್ನ ಅಜ್ಜಿ ಮತ್ತು ತಾಯಿಯ ಜವಾಬ್ದಾರಿ ನಮ್ಮದು, ನೀನು ಆಶ್ರಮದ ಒಳಗೆ ಬಾ' ಅಂತ. ಆದರೆ ನಾನು ಅದನ್ನ ಒಪ್ಪಲಿಲ್ಲ. 'ಕಾವಿ ಬಟ್ಟೆ ಹಾಕ್ಕೊಂಡು ಕೆಟ್ಟ ಕೆಲಸ ಮಾಡೋ ಬದಲು ಬಿಳಿ ಬಟ್ಟೆ ಹಾಕ್ಕೊಂಡು ಒಳ್ಳೆ ಕೆಲಸ ಮಾಡ್ತೀನಿ' ಅಂದೆ. ನನ್ನ ಮಾತನ್ನ ಒಪ್ಪಿದ್ರು, ಮೆಚ್ಕೊಂಡ್ರು. ನಾನು ಇನ್ನೂ ಒಂದು ಮಾತು ಹೇಳಿದ್ದೆ, 'ನಿಮ್ಮಲ್ಲಿಗೆ ಬರೋ ಶ್ರೀಮಂತರ ಮಕ್ಕಳಿಗೆ ನಾನು ಯಾಕೆ ಸೇವೆ ಮಾಡಬೇಕು, ನಾನು ಬಡವ, ಬಡವರ ಮಕ್ಕಳ ಸೇವೇನೇ ಮಾಡ್ತೀನಿ' ಅಂತ.

◆ ಮೈಸೂರಿನಲ್ಲಿ ಎಂ.ಎ. ಮಾಡೋವಾಗಲೇ ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ಜಿ.ಎಸ್. ಶಿವರುದ್ರಪ್ಪ, ಚಿದಾನಂದಮೂರ್ತಿ, ಸುಜನಾ, ಎಸ್.ವಿ. ಪರಮೇಶ್ವರ ಭಟ್ಟ, ವೆಂಕಟರಮಣಪ್ಪ... ಎಲ್ಲರೂ ಸಿಕ್ಕಿದ್ದು. ಎಲ್ಲರೂ ಘಟಾನುಘಟಿಗಳೇ... ಇವರಲ್ಲೆಲ್ಲ ನಿಮ್ಮ ಮೇಲೆ ಬಹಳ ಪ್ರಭಾವ ಬೀರಿದವರು ಯಾರು?

ಡಿಎಲ್ಎನ್ ನನಗೆ ಬಹಳ ಪ್ರಿಯರಾದವರು. ತೀನಂಶ್ರೀ ಕೂಡ ತುಂಬಾ ಒಳ್ಳೆಯ ಮೇಷ್ಟ್ರು. ಆದರೆ ಪಾಂಡಿತ್ಯ, ಜಾತ್ಯತೀತ ಮನೋಭಾವ, ಶಿಷ್ಯ ವಾತ್ಸಲ್ಯದಲ್ಲಿ ಡಿಎಲ್ಎನ್ ಅವರನ್ನ ಮೀರಿಸುವವರು ಅಪರೂಪ. ಜಿಎಸ್ಎಸ್ ಮತ್ತು ನನ್ನ ಸಂಬಂಧ ಎಷ್ಟು ಆಪ್ತವಾದದ್ದು ಅಂತ ಈಗ ಎಲ್ಲರಿಗೂ ತಿಳಿದಿದೆ. ಆದರೆ ನಾನಿನ್ನೂ ವಿದ್ಯಾರ್ಥಿಯಾಗಿರುವಾಗಲೇ ಅವರು ಪಡುವಾರಳ್ಳೀಲಿದ್ದ ನನ್ನ ರೂಮ್‌ಗೆ ಬಂದವರು, 'ಇದೇನಯ್ಯಾ ಇಂಥ ಕಡೆ ಇದೀಯಾ' ಅಂತ ಬೇಸರ ಪಟ್ಟುಕೊಂಡಿದ್ರು. ಆಗ ನನ್ನ ಪರಿಸ್ಥಿತಿ ಎಂಥದ್ದು ಅಂದ್ರೆ, ನಾನೇ ನೇದು, ನಾನೇ ಹೊಲಿದುಕೊಂಡಿದ್ದ ಬಟ್ಟೆ ಹಾಕಿಕೊಳ್ತಾ ಇದ್ದೆ. ಮುಂದೆ ಅವರು ನನಗೆ ಒಂದು ಆಸರೆಯೇ ಆದರು. ಕೊನೆಯವರೆಗೂ ಈ ಆಪ್ತತ್ವ ಉಳಿದುಕೊಂಡಿತು. ಆಗ ನಾವೆಲ್ಲಾ ಸೆಮಿನಾರ್‌ಗೆ ಒಂದು ಪೇಪರ್ ಮಾಡಬೇಕಿತ್ತು. ನಾನು 'ಕನ್ನಡದಲ್ಲಿ ದೆವ್ವದ ಪರಿಕಲ್ಪನೆ' ಅನ್ನೋ ವಿಷಯದ ಮೇಲೆ ಮಾಡಿದ್ದೆ. ಜಿಎಸ್ಎಸ್ 'ಬಹಳ ಒಳ್ಳೆ ವಿಷಯ ತೊಗೊಂಡಿದೀಯಾ' ಅಂತ ಹೇಳಿದ್ರು.

ತಾವು ದೆವ್ವಗಳನ್ನು ಹುಡುಕಿ ಹೊರಟಿದ್ದು ಮೈಸೂರಿನಲ್ಲಿಯೇ ಅಲ್ವಾ?

ಅದೊಂದು ವಯಸ್ಸು ನೋಡಿ, ಅಮಾವಾಸ್ಯೆನಲ್ಲಿ, ನಡುರಾತ್ರೀಲಿ, ದೆವ್ವಗಳ ಹುಡುಕಾಟ ಒಂಥರಾ ರೋಮಾಂಚಕಾರಿ ಅನುಭವ. ಮನುಷ್ಯರನ್ನ ಗೋಳಾಡಿಸುವ ಎಲ್ಲವನ್ನೂ ಹುಡುಕಬೇಕು